# ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
# VISVESVARAYA JALA NIGAM LIMITED
(A Government of Karnataka Enterprise)

ಸಂ: VJNL/Contract/Enrol/2020/569 ದಿನಾಂಕ: 30.06.2020

1. ಮುಖ್ಯ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಲಯ, ತುಮಕೂರು.
2. ಮುಖ್ಯ ಇಂಜಿನಿಯರ್, ವಿಜನಿನಿ, ಭದ್ರಾ ಮೇಲ್ದಂಡೆ ಯೋಜನಾ ವಲಯ, ಚಿತ್ರದುರ್ಗ.

ಮಾನ್ಯರೇ,

ವಿಷಯ: 2015-20ನೇ ಸಾಲಿನ 5 ವರ್ಷಗಳ ಅವಧಿಗಾಗಿ ನಿಗಮದಡಿಯಲ್ಲಿ ಪ್ರವರ್ಗ (Category) 1, 2 ಮತ್ತು 3ರ ಗುತ್ತಿಗೆದಾರರ ನೋಂದಣಿ ಕುರಿತು.

ಉಲ್ಲೇಖ : ಈ ಕಛೇರಿ ಪತ್ರ ಸಂಖ್ಯೆ 3875, ದಿನಾಂಕ 23.03.2020.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಈ ಕಛೇರಿ ಪತ್ರವನ್ನು ಮುಂದುವರೆಸಲಾಗಿದೆ. ಉಲ್ಲೇಖಿತ ಪತ್ರದಲ್ಲಿ ನಿಗಮದಲ್ಲಿ ವಿವಿಧ ಪ್ರವರ್ಗ(Category) ಗಳಲ್ಲಿ ನೋಂದಾಯಿಸಿಕೊಂಡಿರುವ ಗುತ್ತಿಗೆದಾರರ ನೋಂದಣಿ ಪ್ರಮಾಣ ಪತ್ರಗಳ ಕಾಲಾವಧಿಯನ್ನು ದಿ: 30.06.2020 ರವರೆಗೆ ಮುಂದುವರೆಸಿ ಆದೇಶಿಸಲಾಗಿತ್ತು. ಆದರೆ ದೇಶಾದ್ಯಂತ ಕೋವಿಡ್-19 ಸೋಂಕಿನಿಂದಾಗಿ ಲಾಕ್‌ಡೌನ್ ಘೋಷಣೆಯಾಗಿ ಗುತ್ತಿಗೆದಾರರಿಗೆ ಸಾರಿಗೆ ಮತ್ತು ಸಂಪರ್ಕ ಸೌಲಭ್ಯಗಳಿಲ್ಲದೇ ನಿಗದಿತ ವಿಸ್ತರಿತ ಅವಧಿಯಲ್ಲಿ ತಮ್ಮ ನೋಂದಣಿಯನ್ನು ನವೀಕರಿಸುವಲ್ಲಿ ತೊಂದರೆಯಾಗುತ್ತಿರುವ ಹಿನ್ನಲೆಯಲ್ಲಿ ಪ್ರಸ್ತುತ 30.06.2020 ರಿಂದ ಮುಂದಿನ 3 ತಿಂಗಳ ಅವಧಿಗೆ ಅಂದರೆ 30.09.2020 ರವರೆಗೆ ನಿಗಮದಲ್ಲಿ ಈ ಹಿಂದೆ 2015-2020 ರ ಅವಧಿಯಲ್ಲಿ ನೋಂದಾಯಿಸಿಕೊಂಡಿರುವ ವಿವಿಧ ಪ್ರವರ್ಗಗಳ ಗುತ್ತಿಗೆದಾರರ ಪ್ರಮಾಣ ಪತ್ರಗಳ ಕಾಲಾವಧಿಯನ್ನು ಲೋಕೋಪಯೋಗಿ ಇಲಾಖೆಯಲ್ಲಿನ ಅವರ ಪ್ರಥಮ ದರ್ಜೆ ಗುತ್ತಿಗೆದಾರರ ಪ್ರಮಾಣ ಪತ್ರಗಳು ಚಾಲ್ತಿಯಲ್ಲಿರುವ ಷರತ್ತಿನೊಂದಿಗೆ ವಿಸ್ತರಿಸಲಾಗಿದೆ.

ಅದರನ್ವಯ ನಿಯಮಾನುಸಾರ ಗುತ್ತಿಗೆದಾರರು ವಿಸ್ತರಿತ ಅವಧಿಯಲ್ಲಿ ಅವರ ಅರ್ಹತೆಯ ಅನುಸಾರ ವಿವಿಧ ಪ್ರವರ್ಗ(Category)ಗಳ ಪ್ರಮಾಣ ಪತ್ರಗಳನ್ನು ನವೀಕರಿಸಿಕೊಳ್ಳಲು/ ನೋಂದಾಯಿಸಿಕೊಳ್ಳಲು ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

ವ್ಯವಸ್ಥಾಪಕ ನಿರ್ದೇಶಕರು,
ವಿಜನಿನಿ, ಬೆಂಗಳೂರು.

Regd. Office : # 148, Ground Floor, Embassy Square, Infantry Road, Bangalore - 560001
Ph : 080-22256688 / 22289966 / Fax : 080 - 22264477 / Email : mdvjnl@gmail.com / techvjnl@gmail.com | website : www.vjnl.in
CIN : U41000KA2016SGC097260